**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 06-11-2025:**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

10.ವಶಪಡಿಸಿಕೊಂಡ ಹಣವನ್ನು ನ್ಯಾಯಾಲಯದ ಅನುಮತಿ ಪಡೆದು ಹಾಸನ ಲೋಕಾಯುಕ್ತ ಪೊಲೀಸ್ ಅಧೀಕ್ಷಕರ ಹೆಸರಿನಲ್ಲಿ ಪ್ರತ್ಯೇಕ ಖಾತೆ ತೆರೆದು ಆ ಖಾತೆಯಲ್ಲಿ ಹಣವನ್ನು ಇರಿಸಿರುತ್ತೇನೆ.

11.ಆರೋಪಿತರ ಮನೆಯಲ್ಲಿ ನಡೆಸಿದ ನಿಪಿ-15ರ ಪಂಚನಾಮೆ ಸಮಯದಲ್ಲಿ ವಶಪಡಿಸಿಕೊಂಡ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ನೀಡಿದ 4 ಗುರುತಿನ ಚೀಟಿ ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ-93 ಎಂದು ಗುರುತಿಸಲಾಯಿತು. ಸಹನಾ ಮಲ್ಟಿ ಪರ್ಪಸ್ ಸೌಹಾರ್ದ ಕೋಆಪರೇಟಿವ್ ಲಿಮಿಟೆಡ್ ಹಾಸನ ಇವರು ನೀಡಿರುವ 3 ಬಿಲ್ ಗಳನ್ನು ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ-94 ಎಂದು ಗುರುತಿಸಲಾಯಿತು. ರಾಂ ದೇವ್ ಆಟೋಮೊಬೈಲ್ಸ್ ರವರು ನೀಡಿರುವ ಬಿಲ್ ನೋಡುತ್ತಿದ್ದು ಅದನ್ನು ನಿಪಿ-95 ಎಂದು ಗುರುತಿಸಲಾಯಿತು. Universal Cell ಇವರು ನೀಡಿರುವ ಇನ್ವಾಯ್ಸು ನೋಡುತ್ತಿದ್ದು ಅದನ್ನು ನಿಪಿ-96 ಎಂದು ಗುರುತಿಸಲಾಯಿತು. ವಿಜಯ್ ಎಂಟರ್ ಪ್ರೈಸಸ್ ರವರು ನೀಡಿರುವ ಕ್ಯಾಷ್ ಬಿಲ್ ನೋಡುತ್ತಿದ್ದು ಅದನ್ನು ನಿಪಿ-97 ಎಂದು ಗುರುತಿಸಲಾಯಿತು. ಎಸ್.ವಿ ಎಂಟರ್ ಪ್ರೈಸಸ್, ಹಾಸನ ರವರು ನೀಡಿರುವ 2ಟ್ಯಾಕ್ಸ್ ಇನ್ವಾಯ್ಸ್ ನ ಜೆರಾಕ್ಸ್ ಪ್ರತಿ ನೋಡುತ್ತಿದ್ದು ಅವುಗಳನ್ನು ತಕರಾರಿಗೊಳಪಟ್ಟು ಒಟ್ಟಾಗಿ ನಿಪಿ-98 ಎಂದು ಗುರುತಿಸಲಾಯಿತು. ರಾಜಶ್ರೀ ಶೋರೂಂನ estimate ಬಿಲ್ ನೋಡುತ್ತಿದ್ದು ಅದನ್ನು ನಿಪಿ- 99ಎಂದು ಗುರುತಿಸಲಾಯಿತು. ಹ್ಯಾಪ್ಪಿ ಫೇಸಸ್ ಪಾರ್ಟಿ ಸೇಲ್ಸ್ ರವರು ನೀಡಿರುವ 21 ಕ್ಯಾಷ್ ರಶೀದಿ ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ-100 ಎಂದು ಗುರುತಿಸಲಾಯಿತು. ಶಂಕರ್ ಮೋಟರ್ಸ್,ಬಿ ಎಂ ರಸ್ತೆ, ಹಾಸನ, ಇವರು ನೀಡಿರುವ 3 ಬಿಲ್ ನ್ನು ಹಾಗೂ ಒಂದು ಇನ್ವಾಯ್ಸ್ ನ್ನು ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ-101 ಎಂದು ಗುರುತಿಸಲಾಯಿತು. ಶ್ರೀಮತಿ ಶುಭಾ ರವರ ಹೆಸರಿನಲ್ಲಿರುವ ನ್ಯಾಷನಲ್ ಇನ್ಸುರೆನ್ಸ್ ಕಂಪೆನಿಯ ರಶೀದಿ ನೋಡುತ್ತಿದ್ದು ನಿಪಿ-102 ಎಂದು ಗುರುತಿಸಲಾಯಿತು. ಫರ್ನಿಚರ್ ಶಾಪ್ ರವರು ನೀಡಿರುವ

2 ಬಿಲ್ ನೋಡುತ್ತಿದ್ದು **ನಿಪಿ-103** ಎಂದು ಗುರುತಿಸಲಾಯಿತು. ಎನ್ ಜಿ ಸಿಸ್ಟಂಸ್ ರವರು ನೀಡಿರುವ ಇನ್ವಾಯ್ಸ್ ನೋಡುತ್ತಿದ್ದು **ನಿಪಿ-104** ಎಂದು ಗುರುತಿಸಲಾಯಿತು. ಪಿ ಎ ಸಿ ಎಲ್ ಲಿಮಿಟೆಡ್ ರವರು ನೀಡಿರುವ ರಶೀದಿ ನೋಡುತ್ತಿದ್ದು ಅದನ್ನು **ನಿಪಿ-105** ಎಂದು ಗುರುತಿಸಲಾಯಿತು. ಶುಭಾ ಗ್ಲಾಸ್ ಹೌಸ್ ರವರು ನೀಡಿರುವ ರಶೀದಿ ನೋಡುತ್ತಿದ್ದು ಅದನ್ನು **ನಿಪಿ-106** ಎಂದು ಗುರುತಿಸಲಾಯಿತು. ಪ್ರೆಸ್ಟೀಜ್ ಸರ್ವೀಸ್ ಸೆಂಟರ್ ರವರ ನೀಡಿರುವ ಕ್ಯಾಷ್ ಬಿಲ್ ನೋಡುತ್ತಿದ್ದು ಅದನ್ನು **ನಿಪಿ-107** ಎಂದು ಗುರುತಿಸಲಾಯಿತು. ಭಾರತಿ ಸ್ಟೀಲ್ ಸೆಂಟರ್ ಬೆಂಗಳೂರು ಇವರು ನೀಡಿರುವ ಟ್ಯಾಕ್ಸ್ ಇನ್ವಾಯ್ಸ್ ನೋಡುತ್ತಿದ್ದು ಅದನ್ನು **ನಿಪಿ-108** ಎಂದು ಗುರುತಿಸಲಾಯಿತು. ಆರೋಪಿತರು ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ 3 ಹೊರರೋಗಿ ಬಿಲ್ ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ **ನಿಪಿ-109** ಎಂದು ಗುರುತಿಸಲಾಯಿತು. ಬ್ರೈನ್ ಚೈಲ್ಡ್ ಸಂಸ್ಥೆಯವರು ನೀಡಿರುವ 15 ರಶೀದಿ ನೋಡುತ್ತಿದ್ದು ಅದನ್ನು ಒಟ್ಟಾಗಿ **ನಿಪಿ-110** ಎಂದು ಗುರುತಿಸಲಾಯಿತು. ದಾಸ್ ಡಯಾಗ್ನಸ್ಟಿಕ್ ನವರು ನೀಡಿರುವ ಬಿಲ್ ನೋಡುತ್ತಿದ್ದು ಅದನ್ನು **ನಿಪಿ-111** ಎಂದು ಗುರುತಿಸಲಾಯಿತು. ಕೇಶವ ನೇತ್ರಾಲಯದವರು ನೀಡಿರುವ ಬಿಲ್ ನೋಡುತ್ತಿದ್ದು ಅದನ್ನು **ನಿಪಿ-112** ಎಂದು ಗುರುತಿಸಲಾಯಿತು.

ನಿಪಿ-113 - ಆರೋಪಿತರ ಪತ್ನಿ ಶುಭಾರವರ ಹೆಸರಿನಲ್ಲಿರುವ ನಗರಸಭೆ ಹಾಸನ ರವರು ನೀಡಿರುವ 3 ರಶೀದಿ

ನಿಪಿ-114 - ಆರೋಪಿತರ ಹೆಸರಿನಲ್ಲಿರುವ ಬಿ ಎಸ್ ಎನ್ ಎಲ್ ಕಛೇರಿಯ ಡಿಮ್ಯಾಂಡ್ ನೋಟ್

ನಿಪಿ-115 -ಎಸ್ ವಿ ಎಂಟರ್ ಪ್ರೈಸಸ್ ವಿದ್ಯಾನಗರ ಹಾಸನ ಇವರು ನೀಡಿರುವ 2 ಕೊಟೇಶನ್

ನಿಪಿ-116 - ಆರೋಪಿತರ ಹೆಸರಿನಲ್ಲಿರುವ ನಗರಸಭೆ, ಹಾಸನ ಇವರು ನೀಡಿರುವ ರಶೀದಿ

ನಿಪಿ-117- ಆರೋಪಿತರ ಮಗ ಪ್ರಮುಖ್ ರವರಿಗೆ ಸಂಬಂಧಿಸಿದ ವಿಜಯಾ ಇಂಗ್ಲೀಷ್ ಸ್ಕೂಲ್ ನ 7 ಟ್ಯೂಷನ್ ಫೀ ರಶೀದಿ ಮತ್ತು 2 ವಿಜಯಾ ಎಂಟರ್ ಪ್ರೈಸಸ್ ರವರ ನೀಡಿರುವ ಕ್ಯಾಷ್ ಬಿಲ್

ನಿಪಿ-118- ಆರೋಪಿತರ ಮಗ ಪ್ರಣವ್ ರವರಿಗೆ ಸಂಬಂಧಿಸಿದಂತೆ ವಿಜಯಾ ಇಂಗ್ಲಿಷ್ ಸ್ಕೂಲ್ ನ 2 ಟ್ಯೂಷನ್ ಫೀ ರಶೀದಿ

ನಿಪಿ-119- ಚಂದನ್ ಆಟೋ ಟ್ರೇಡರ್ಸ್ ರವರು ನೀಡಿರುವ ಬಿಲ್

ನಿಪಿ-120- ಆರೋಪಿತರಿಗೆ ಸೇರಿದ ಕೆನರಾ ಬ್ಯಾಂಕ್ ಖಾತೆ ಸಂಖ್ಯೆ 0531101046253ಕ್ಕೆ ಸಂಬಂಧಿಸಿದ ಬ್ಯಾಂಕ್ ಪಾಸ್ ಬುಕ್

ನಿಪಿ-121- ಆರೋಪಿತರಿಗೆ ಸೇರಿದ ಕೆನರಾ ಬ್ಯಾಂಕ್ ಖಾತೆ ಸಂಖ್ಯೆ 4306ಕ್ಕೆ ಸಂಬಂದಿಧಸಿದ ಬ್ಯಾಂಕ್ ಪಾಸ್ ಬುಕ್

ನಿಪಿ-122- ಆರೋಪಿತರಿಗೆ ಸೇರಿದ ಕಾವೇರಿ ಗ್ರಾಮೀಣ ಬ್ಯಾಂಕ್ ಖಾತೆ ಸಂಖ್ಯೆ 6893ಕ್ಕೆ ಸಂಬಂಧಿಸಿದ ಬ್ಯಾಂಕ್ ಪಾಸ್ ಬುಕ್

ನಿಪಿ-123- ಆರೂಪಿತರಿಗೆ ಸೇರಿದ ಸಿಂಡಿಕೇಟ್ ಬ್ಯಾಂಕ್ ಖಾತೆ ಸಂಖ್ಯೆ 7571ಕ್ಕೆ ಸಂಬಂದಿಧಸಿದ ಬ್ಯಾಂಕ್ ಪಾಸ್ ಬುಕ್

ನಿಪಿ-124-ಆರೋಪಿತರ ಹೆಂಡತಿ ಶುಭಾ ರವರಿಗೆ ಸೇರಿದ ಕೆನರಾ ಬ್ಯಾಂಕ್ ಖಾತೆ ಸಂಖ್ಯೆ 0531101053960ಕ್ಕೆ ಸಂಬಂಧಿಸಿದ ಬ್ಯಾಂಕ್ ಪಾಸ್ ಬುಕ್

ನಿಪಿ-125- ಆರೋಪಿತರ ಹೆಂಡತಿ ಶುಭಾ ರವರಿಗೆ ಸೇರಿದ ಎಡಿ ಬ್ರ್ಯಾಂಚ್ ಎಸ್ ಬಿ ಎಂ ಹಾಸನ ಖಾತೆ ಸಂಖ್ಯೆ 01190008553ಕ್ಕೆ ಸಂಬಂಧಿಸಿದ ಬ್ಯಾಂಕ್ ಪಾಸ್ ಬುಕ್

12.ಆರೋಪಿತರ ಮನೆಯ ಮಾಸ್ಟರ್ ಬೆಡ್ ರೂಂ ನ 2ನೇ ಕಂಪಾರ್ಟ್ ಮೆಂಟ್ ನಲ್ಲಿ ದೊರೆತ ದಾಖಲೆಗಳನ್ನು ನೋಡುತ್ತಿದ್ದೇನೆ.

ನಿಪಿ-126- ವಾಹನ ಸಂಖ್ಯೆ ಕೆಎ-02-ಎಂಇ -4662ರ ವಿಮಾ ಪಾಲಿಸಿ,(4 ಶೀಟು)

ನಿಪಿ-127 ಕೆಎ-13-ಎಸ್ 29ರ ವಿಮಾ ಪಾಲಿಸಿ (2 ಶೀಟು)

ನಿಪಿ-128- ಕೆಎ-13-3866ರ ವಿಮಾ ಪಾಲಿಸಿ

ನಿಪಿ-129- ಆರೋಪಿತರ ಹೆಸರಿನಲ್ಲಿ ಕೆನರಾ ಬ್ಯಾಂಕ್ ನಲ್ಲಿರುವ ಡಿಮ್ಯಾಟ್ ಅಕೌಂಟ್ ಸ್ಟೇಟ್ಮೆಂಟ್

ನಿಪಿ-130- ಬಜಾಜ್ ಅಲಿಯಾನ್ಸ್ ಇನ್ಸುರೆನ್ಸ್ ರವರು ನೀಡಿರುವ ರಿನ್ಯೂವಲ್ ಪ್ರೀಮಿಯಂ ನೋಟೀಸು

ನಿಪಿ-131 ಆರೋಪಿತರ ಪತ್ನಿ ಶುಭಾರವರ ಹೆಸರಿಗೆ ಡಿ ಹೆಚ್ ಎಫ್ ಎಲ್ ಗೆ ಹಣ ಪಾವತಿಸಿರುವ ರಶೀದಿ

ನಿಪಿ-132- ಆರೋಪಿತರ ಪತ್ನಿ ಶುಭಾರವರ ಹೆಸರಿಗೆ ಡಿ ಹೆಚ್ ಎಫ್ ಎಲ್ ನಲ್ಲಿ ಸಾಲ ಮಂಜೂರಾದ ಬಗ್ಗೆ ಮಂಜೂರಾತಿ ಪತ್ರ

ನಿಪಿ-133- ಆರೋಪಿತರ ಮಗ ಪ್ರಣವ್ ರವರು ಯು ಟಿ ಐ ಮ್ಯೂಚುವಲ್ ಫಂಡ್ ನಲ್ಲಿ ಹೊಂದಿರುವ ಅಕೌಂಟ್ ಸ್ಟೇಟ್ಮೆಂಟ್

ನಿಪಿ-134- ಆರೋಪಿತರ ಮಗ ಪ್ರಮುಖ್ ರವರು ಯು ಟಿ ಐ ಮ್ಯೂಚುವಲ್ ಫಂಡ್ ನಲ್ಲಿ ಹೊಂದಿರುವ ಅಕೌಂಟ್ ಸ್ಟೇಟ್ಮೆಂಟ್

ನಿಪಿ-135- ಆರೋಪಿತರ ಪತ್ನಿ ಶುಭಾರವರು ಯು ಟಿ ಐ ಮ್ಯೂಚುವಲ್ ಫಂಡ್ ನಲ್ಲಿ ಹೊಂದಿರುವ ಅಕೌಂಟ್ ಸ್ಟೇಟ್ಮೆಂಟ್

ನಿಪಿ-136 ಆರೋಪಿತರು ಯು ಟಿ ಐ ಮ್ಯೂಚುವಲ್ ಫಂಡ್ ನಲ್ಲಿ ಹೊಂದಿರುವ ಅಕೌಂಟ್ ಸ್ಟೇಟ್ಮೆಂಟ್

ನಿಪಿ-137 - ಆರೋಪಿತರ ಪತ್ನಿರವರು ಹೊಂದಿರುವ ಎಲ್ ಐ ಸಿ ಮ್ಯೂಚುವಲ್ ಫಂಡ್ ನಲ್ಲಿ ಹೊಂದಿರುವ ಅಕೌಂಟ್ ಸ್ಟೇಟ್ಮೆಂಟ್

ನಿಪಿ-138- ಆರೋಪಿತರ ಪತ್ನಿರವರು ಹೊಂದಿರುವ ಕಾರ್ವೆ ಫಿನಾ ಪಾಲಿಸಿಯ ಸ್ಟೇಟ್ಮೆಂಟ್ ಪ್ರತಿ

ನಿಪಿ-139- ಆರೋಪಿತರ ಹೆಸರಿನಲ್ಲಿದ್ದ ದೂರವಾಣಿ ಸಂಖ್ಯೆ231437ರ ಬಿಲ್

ನಿಪಿ-140 - ಆರೋಪಿತರ ಪತ್ನಿ ಚಾಂದಿನಿ ನ್ಯೂರೋ ಸರ್ಜಿಕಲ್ ಕ್ಲಿನಿಕ್ ನಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ

ನಿಪಿ-141- ಹಾಸನದ ಮಂಗಳಾ ಆಸ್ಪತ್ರೆಯಲ್ಲಿ ಆರೋಪಿತರು ಚಿಕಿತ್ಸೆ ಪಡೆದ ಬಗ್ಗೆ ದಾಖಲೆ

ನಿಪಿ-142- ಆರೋಪಿತರು ಐಸಿಐಸಿಐ ಪ್ರುಡೆನ್ಷಿಯಲ್ ನಲ್ಲಿ ಹೊಂದಿರುವ ಇನ್ಸುರೆನ್ಸ್ ಪಾಲಿಸಿ ಪ್ರತಿ

ನಿಪಿ-143 ಆರೋಪಿತರ ಪತ್ನಿ ಹೆಸರಿನಲ್ಲಿರುವ ಭಾರತ್ ಗ್ಯಾಸ್ ಒಂದು ವೋಚರ್ ಬಿಲ್

ನಿಪಿ-144 ವೆಂಕಟೇಗೌಡರ ಹೆಸರಿನಲ್ಲಿಕರುವ ಭಾರತ್ ಗ್ಯಾಸ್ ವೋಚರ್ ಬಿಲ್

ನಿಪಿ-145- ಆರೋಪಿತರು ಜೇವನ್ ಸ್ಟಾರ್ ಲಿಂಕ್ಸ್ ಕೇಬಲ್ ನವರಿಂದ ಕೇಬಲ್ ಸಂಪರ್ಕ ಪಡೆದು ಹಣ

ಪಾವತಿಸಿದ ಬಗ್ಗೆ ಕೇಬಲ್ ಕಾರ್ಡ್

13.ಆರೋಪಿತರ ಮನೆಯ ಮಾಸ್ಟರ್ ಬೆಡ್ ರೂಂನ 3ನೇ ಕಂಪಾರ್ಟ್ ಮೆಂಟ್ ನಲ್ಲಿ ದೊರೆತ ದಾಖಲೆಗಳನ್ನು ನೋಡುತ್ತಿದ್ದೇನೆ.

ನಿಪಿ-146- ದಿನಾಂಕ 17-3-10ರಂದು ಆರೋಪಿತರ ಪತ್ನಿ ಶ್ರೀಮತಿ ಲಾವಣ್ಯರವರಿಂದ ನಿವೇಶನ ಖರೀದಿಸಲು ಮಾಡಿಕೊಂಡಿರುವ ಸಮ್ಮತಿ ಪತ್ರ

ನಿಪಿ-147- ದಿನಾಂಕ 8-10-2009ರಂದು ಆರೋಪಿತರ ಪತ್ನಿಗೆ ಈರಪ್ಪ ಮತ್ತಿತರರು ಬರೆದುಕೊಟ್ಟಿರುವ ಎದುರುನುಡಿ ಪತ್ರ

ನಿಪಿ-148- ದಿನಾಂಕ 8-10-2009ರಂದು ಆರೋಪಿತರ ಪತ್ನಿಗೆ ಈರಪ್ಪ ಮತ್ತು ಅವರ ಮಕ್ಕಳು ಬರೆದುಕೊಟ್ಟಿರುವ ಕ್ರಯಪತ್ರದ ನಕಲುಪ್ರತಿ

ನಿಪಿ-149-ನಗರಸಭೆ ಕಾರ್ಯಾಲಯದವರು ನೀಡಿದ ದೃಢೀಕರಣ ಪತ್ರ

ನಿಪಿ-150 ಸ್ವಯಂ ಘೋಷಿತ ಆಸ್ತಿ ತೆರಿಗೆ ಹಣ ಪಾವತಿಸಿದ ಚಲನ್

ನಿಪಿ-151- ದಿನಾಂಕ 27-12-11ರಂದು ಹಾಸನ ನಗರಸಭೆ ಕಾರ್ಯಾಲಯದವರು ನೀಡಿರುವ ಆಸ್ತಿ ತೆರಿಗೆ ಪ್ರತಿ

ನಿಪಿ-152-ದಿನಾಂಕ 14-9-2011ರಂದು ನಗರಸಭೆ ಕಾರ್ಯಾಲಯದವರು ಆರೋಪಿತರ ಪತ್ನಿಗೆ ನೀಡಿರುವ ಪ್ರಾರಂಭಿಕ ನಿರ್ಣಯ ಪತ್ರದ ಪ್ರತಿ

ನಿಪಿ-153- ಹಾಸನ ನಗರಸಭೆಯವರು ಆರೋಪಿತರ ಪತ್ನಿಗೆ ಮನೆ ನಿರ್ಮಾಣ ಮಾಡಲು ನೀಡಿರುವ ಅನುಮತಿ ಪತ್ರದ ನಕಲು

ನಿಪಿ-154- ದಿನಾಂಕ 20-7-2009ರಂದು ಹಾಸನ ನಗರಾಭಿವೃದ್ಧಿ ಪ್ರಾಧಿಕಾರದವರು ನಗರಸಭೆ ಪೌರಾಯುಕ್ತರಿಗೆ ಬರೆದ ಪತ್ರ

ನಿಪಿ-155- ಹೀರೋಹೋಂಡಾ ಬೈಕ್ ಸಂಖ್ಯೆ ಕೆಎ-13-ಜೆ-8534ರ ಆರ್ ಸಿ ಪುಸ್ತಕ

ನಿಪಿ-156 - ಆರೋಪಿತರ ಪತ್ನಿ ಶುಭಾರವರ ಹೆಸರಿನಲಿಲದ್ದ ವಾಹನನ ಸಂಖ್ಯೆ ಕೆಎ-13-ಎಸ್-0029ರ

ಸ್ಮಾರ್ಟ್ ಕಾರ್ಡ್ ಆರ್ ಸಿ

ನಿಪಿ-157- 2012-13ನೇ ಸಾಲಿನಲ್ಲಿ ಆರೋಪಿತರು ಆದಾಯ ತೆರಿಗೆ ಇಲಾಖೆಗೆ ಆದಾಯ ತೆರಿಗೆ ರಿಟರ್ನ್ ಸಲ್ಲಿಸಿದ ಬಗ್ಗೆ ವೆರಿಫಿಕೇಷನ್ ಫಾರಂನ ಪ್ರತಿ, ಅದಕ್ಕೆ ಲಗತ್ತಾಗಿ 2012-13ರ ಸ್ಟೇಟ್ಮೆಂಟ್ ಆಫ್ ಇನ್ಕಂ ಪ್ರತಿ ಇರುತ್ತದೆ

ನಿಪಿ-158- ಆರೋಪಿತರು ಹಾಸನ ಹೌಸಿಂಗ್ ಬೋರ್ಡ್ ವತಿಯಿಂದ ದಿಃ13-6-2001 ರಂದು ಮಾಡಿಕೊಂಡಿರುವ ಲೀಸ್ ಕಂ ಸೇಲ್ ಅಗ್ರಿಮೆಂಟ್ ಪ್ರತಿ

ನಿಪಿ-159- ಆರೋಪಿತರು 31-3-2013ರ ಅಂತ್ಯಕ್ಕೆ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿಕೊಂಡಿರುವ ಸ್ಥಿರಾಸ್ತಿ ವಿವರದ ನಕಲು ಪ್ರತಿ

ನಿಪಿ-160-ದಿನಾಂಕ 12-4-13 ರಂದು ಆರೋಪಿತರು ಕುವೆಂಪುನಗರದ ವಾಸದ ಮನೆಯನ್ನು ಲತೇಶ್ ಎಂಬುವವರಿಗೆ ಭೋಗ್ಯಕ್ಕೆ ನೀಡಿರುವ ಬಗ್ಗೆ ಭೋಗ್ಯ ಒಪ್ಪಂದದ ಕರಾರು ಪತ್ರ

ನಿಪಿ-161-ದಿನಾಂಕ 1-4-2013 ರಂದು ಆರೋಪಿತರು ಉದಯಗಿರಿ ಬಡಾವಣೆಯ ಮನೆಯ ಮೊದಲ ಅಂತಸ್ತನ್ನು ಧನಂಜಯ ಎಂಬುವವರಿಗೆ ನೀಡಿರುವ ಭೋಗ್ಯದ ಕರಾರು ಪತ್ರ

14.ಆರೋಪಿತರು ಮೂಲತಃ ಆಲೂರು ಗ್ರಾಮದವರಾಗಿದ್ದು ಅವರ ತಂದೆ ತಾಯಿಗೆ 4 ಮಕ್ಕಳಿದ್ದು ಆರೋಪಿತರು ಮೊದಲನೇ ಮಗನಾಗಿರುತ್ತಾರೆ, 2ನೇಯವರು ರವಿ, 3ನೇಯವರು ಮಮತಾ, 4ನೇ ಯವರು ಲಲಿತಮ್ಮ. 2ನೇ ಯವರು ಹಾಸನ ಖಾಸಗಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. 3ನೇ ಯವರು ಅಂಗನವಾಡಿ ಟೀಚರ್ ಆಗಿದ್ದರು. 4ನೇಯವರು ಆಲೂರು ಪಟ್ಟಣಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆರೋಪಿತರಿಗೆ ಶುಭಾ ಎಂಬ ಪತ್ನಿ ಮತ್ತು ಪ್ರಮುಖ್ ಮತ್ತು ಪ್ರಣವ್ ಎಂಬ ಇಬ್ಬರು ಮಕ್ಕಳು ಇದ್ದು ಅವರು 5 ಮತ್ತು 6ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಚೆಕ್ ಅವಧಿ 1999ರಿಂದ 2013 ಎಂದು ಪರಿಗಣಿಸಲಾಗಿದೆ.

15.ದಿನಾಂಕ 26-7-2013ರಂದು ಸಾಕ್ಷಿದಾರರು, ಪಂಚರು ಮತ್ತು ಅಕ್ಕಸಾಲಿಗರ ಹೇಳಿಕೆ

ಮಾಡಿಕೊಂಡಿರುತ್ತೇನೆ. ದಿನಾಂಕ 27-7-13ರಂದು ಚಾಸಾ-1 ಮತ್ತು ಸಿಬ್ಬಂದಿಗಳ ಹೇಳಿಕೆ ಮಾಡಿಕೊಂಡಿರುತ್ತೇನೆ. ದಿನಾಂಕ 6-8-13ರಂದು ಆರೋಪಿತರ ಸಕ್ಷಮ ಪ್ರಾಧಿಕಾರದಿಂದ ಅನುಬಂಧ 1 ರಿಂದ 16(ಬಿ) ವಿವರಗಳನ್ನು ನೀಡುವಂತೆ ಎಡಿಜಿಪಿ ರವರ ಮೂಲಕ ಮನವಿ ಸಲ್ಲಿಸಿರುತ್ತೇನೆ. 14-8-13 ರಂದು ಆರೋಪಿತರಿಗೆ ನಮೂನೆ 17 ರಿಂದ 23ನ್ನು ಭರ್ತಿ ಮಾಡಿಕೊಡುವಂತೆ ತಿಳಿಸಿರುತ್ತೇನೆ.

(ಈ ಹಂತದಲ್ಲಿ ನ್ಯಾಯಾಲಯದ ಕಲಾಪದ ವೇಳೆ ಮುಗಿದಿದ್ದರಿಂದ ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**